# <u>ಕರ್ನಾಟಕ ವಿಧಾನ ಪರಿಷತ್ತು</u>

## <u>ನಿಯಮ-72</u>

**ವಿಷಯ:- ಶ್ರೀ ಮರಿತಿಬ್ಬೇಗೌಡ, ವಿಧಾನ ಪರಿಷತ್ತಿನ ಸದಸ್ಯರು ಇವರು ನಿಯಮ 72ರಡಿ ಸಲ್ಲಿಸಿರುವ ನಿಯಮದ ಮೇರೆಗೆ ಸೂಚನೆ.**

**<u>ಪ್ರಸ್ತಾಪ:-</u>** **ಕೋವಿಡ್-19ರ ಅವಧಿಯ ದಿನಾಂಕ: 02-05-2021ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಕಾಲದಲ್ಲಿ ರೋಗಿಗಳಿಗೆ ಆಕ್ಸಿಜನ್ ಪೂರೈಸದ ಕಾರಣದಿಂದ ಸುಮಾರು 24 ಮಂದಿ ಮೃತಪಟ್ಟಿದ್ದು, ಈ ಸಂಬಂಧ ರಚಿಸಲಾದ ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಬಿ.ಎ. ಪಾಟೀಲರ ಒನ್ ಮ್ಯಾನ್ ಕಮೀಷನ್ ವರದಿಯಲ್ಲಿ, ವಿಪತ್ತು ನಿರ್ವಹಣಾ ಸಮಿತಿಯ ಮುಖ್ಯಸ್ಥರಾದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಅಂದಿನ ಇಬ್ಬರು ಜಿಲ್ಲಾಧಿಕಾರಿಗಳನ್ನು ಹಾಗೂ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಮುಖ್ಯ ಆಡಳಿತಾಧಿಕಾರಿಯನ್ನು (ಸಿ.ಎ.ಒ) ವರದಿಯಲ್ಲಿ ಕೈಬಿಟ್ಟಿರುವುದರಿಂದ, ವರದಿಯ ನೈಜತೆ ಬಗ್ಗೆ ಸಂಶಯ ಉಂಟಾಗಿರುತ್ತದೆ. ಅಲ್ಲದೆ ಮೃತರ ಅವಲಂಬಿತ ಕುಟುಂಬಸ್ಥರಿಗೆ ಸೂಕ್ತ ಪರಿಹಾರ ನೀಡದೇ ಇರುವುದರಿಂದ, ಉಂಟಾದ ಗಂಭೀರ ಸಮಸ್ಯೆ ಕುರಿತು ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಲ್ಲಿ ಪ್ರಸ್ತಾಪ ಬಯಸುತ್ತೇನೆ.**

****

**<u>ಹೇಳಿಕೆ:-</u>**

ಚಾಮರಾಜನಗರ ಜಿಲ್ಲಾಸ್ಪತ್ರೆ, ಚಾಮರಾಜನಗರ ಇಲ್ಲಿ ದಿನಾಂಕ: 03/05/2021ರಂದು ಕೋವಿಡ್-19 ರೋಗಿಗಳು ಮರಣ ಹೊಂದಿದ ಘಟನೆಗೆ ಸಂಬಂಧಿಸಿದಂತೆ, ಶ್ರೀ ಬಿ.ಎ. ಪಾಟೀಲ್, ನಿವೃತ್ತ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ ಇವರು ಸಲ್ಲಿಸಿರುವ ತನಿಖಾ ವರದಿಯಲ್ಲಿ, ತನಿಖೆಯಲ್ಲಿ ಸಂಬಂಧಪಟ್ಟ ರೋಗಿಗಳ ಸಂಬಂಧಿಕರು ಮತ್ತು ಘಟನೆ ನಡೆದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿರುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳನ್ನು ಸುದೀರ್ಘವಾಗಿ ವಿಚಾರಣೆಗೆ ಒಳಪಡಿಸಲಾಗಿದೆ. ವರದಿಯಲ್ಲಿ, ಕರ್ತವ್ಯ ನಿರ್ಲಕ್ಷ್ಯತೆ ವಹಿಸಿರುತ್ತಾರೆಂದು ಆರೋಪಿಸಿರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಪರಿಶೀಲನೆಯಲ್ಲಿರುತ್ತದೆ.

ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021ರಂದು ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 6435/2020 ಮತ್ತು ಅದಕ್ಕೆ ಹೊಂದಿಕೊಂಡಂತೆ ಇತರೆ ಅರ್ಜಿಗಳ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 20.05.2021ರಂದು ವಿಚಾರಣೆಗೆ ಕೈಗೆತ್ತಿಕೊಂಡು ನೀಡಿದ್ದ ನಿರ್ದೇಶನದಂತೆ ತಲಾ ರೂ.2.00 ಲಕ್ಷ (ಎರಡು ಲಕ್ಷ ರೂಪಾಯಿಗಳು ಮಾತ್ರ) ದಿನಾಂಕ: 21.05.2021ರಲ್ಲಿ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

ಸದರಿ ಅರ್ಜಿಯ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 06.07.2021ರಂದು ಮರು ವಿಚಾರಣೆಗೆ ಕೈಗೆತ್ತಿಕೊಂಡ ಸಂದರ್ಭದಲ್ಲಿ, ಮಾನ್ಯ ನ್ಯಾಯಾಲಯಕ್ಕೆ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ರವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಗಣಿಸಿ, ಮಾನ್ಯ ನ್ಯಾಯಾಲಯವು ನೀಡಿದ ನಿರ್ದೇಶನದಂತೆ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021 ರಂದು

149-ಬಿ
872-57

ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಪೈಕಿ ಕೆಳಕಂಡ 13 ಮೃತಪಟ್ಟ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ಹೆಚ್ಚುವರಿಯಾಗಿ ತಲಾ ರೂ. 3.00 ಲಕ್ಷ (ಮೂರು ಲಕ್ಷ ರೂಪಾಯಿಗಳು ಮಾತ್ರ) ಪರಿಹಾರವನ್ನು ದಿನಾಂಕ: 15.07.2021ರಲ್ಲಿ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

| | |
|---|---|
| 1. | ಶ್ರೀ ಮೋಹನ್ ರಾಜ್ ಮೇಘವತ್ ಬಿನ್. ರಾಜ್ ನಾಯಕ |
| 2. | ಶ್ರೀಮತಿ ಮಂಜುಳ ಕೋಂ. ಸಿದ್ದನಾಯಕ, ಹೊಸೂರು |
| 3. | ಶ್ರೀ ಮಹದೇವ ಸ್ವಾಮಿ ಮರಿಯಪ್ಪ, ಬಿನ್. ಯರಿಯೂರು. |
| 4. | ಶ್ರೀಮತಿ ನಾಗಮ್ಮ ಕೋಂ. ಶ್ರೀ ವೀರಭದ್ರ ನಾಯಕ್, |
| 5. | ಶ್ರೀ ಮಹದೇವ ಸ್ವಾಮಿ ಬಿನ್. ಗುರುಸಿದ್ದಪ್ಪ |
| 6. | ಶ್ರೀ ದೊಡ್ಡಯ್ಯ ಬಿನ್. ಮರಿಸಿದ್ದಯ್ಯ |
| 7. | ಶ್ರೀ ಅಜಯ್ ಕುಮಾರ್ ಬಿನ್. ನಾಗರಾಜಪ್ಪ |
| 8. | ಶ್ರೀ ಸುರೇಂದ್ರ ಬಿನ್. ಸಿದ್ದಯ್ಯ |
| 9. | ಶ್ರೀಮತಿ ಸರೋಜಮ್ಮ ಕೋಂ. ಮಣಿ |
| 10. | ಶ್ರೀ ಸುಮೇಶ್ ಬಿನ್. ಮರಿಸ್ವಾಮಿ |
| 11. | ಶ್ರೀ ಯೋಗೇಶ್‌ನಯ ಬಿನ್. ಕೃಷ್ಣನಯ |
| 12. | ಶ್ರೀ ಶಿವಸ್ವಾಮಿ ಬಿನ್. ಚನ್ನಯ್ಯ |
| 13. | ಶ್ರೀಮತಿ ಮಹದೇವಮ್ಮ ಕೋಂ. ಸೋಮಣ್ಣ |

**ಸಂಖ್ಯೆ: ಆಕುಕ 30 ಎಂಎಸ್‌ಎ 2023**

**(ಡಾ.ಕೆ. ಸುಧಾಕರ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**